Assault on Journalists

502. Sri D. B. KALMANKAR (Aland). –

Will the Chief Minister be pleased to state :—

(*a*) whether there was manhandling and wrongful confinement of two journalists who had gone with the copies of their paper for distribution on 19th November 1968 to Dharmasthala in South Kanara District on the occasion of Sarva Dharma Sammelan ;

(*b*) if so, action taken in this behalf ;

(*c*) whether there is permanent police station at Dharmasthala to maintain law and order ;

(*d*) if not, whether the Government proposes to establish a permanent police station in view of huge pilgrimage and importance of the place ?

Sri VEERENDRA PATIL (Chief Minister).—

(*a*) There was an attempt to assault.

(*b*) The police intervened and brought the situation under control.

(*c*) No.

(*d*) There is no proposal at present.

Assault on Journalists

541. Sri B. BHASKER SHETTY (Kaup).—

Will the Chief Minister be pleased to state :—

(*a*) whether Government is aware that on 19th November 1968 atrocities have been committed on Newspaper Editors, Journalists at Dharmasthala ;

(*b*) if so, who are the Newspaper Editors and Journalists involved in this affair ;

(*c*) the nature of atrocity committed on them ;

(*d*) what action the police have taken when these atrocities were taking place ;

(*e*) what urgent action Government has taken in this matter ?

Sri VEERENDRA PATIL (Chief Minister).—

(*a*) There was an attempt of assault on Newspapers Editors.

(*b*) Editor of Jana Jagrathi and Editior, Malnad Weekly.

(*c*) Does not arise in view of reply to clause (*a*).

(*d*) The police intervened and brought the situation under control.

(*e*) Does not arise in view of reply to clause (*d*).

Sri D. B. KALMANKAR.—May I know whether it is a fact that a detailed complaint is made to the Hon. Chief Minister and a copy sent to the Prime Minister regarding this incident?

† **Sri VEERENDRA PATIL.**—Detailed complaint by whom?

Sri D. B. KALMANKAR.—By the journalists and by those who were assaulted.

Sri VEERENDRA PATIL.—No Sir; so far, to my knowledge, no complaint has been made.

ಶ್ರೀ ಬಿ. ಭಾಸ್ಕರಶೆಟ್ಟಿ.—ಸ್ವಾಮಿ, ಧರ್ಮಸ್ಥಳದಲ್ಲಿ ಅಧಿಕಾರಿಗಳ ಒಂದು ಗಲಾಟೆ ಏಕೆ ಪ್ರಾರಂಭವಾಯಿತು?

ಶ್ರೀ ವೀರೇಂದ್ರ ಪಾಟೀಲ್.—ಇಬ್ಬರು ಪತ್ರಿಕಾಪ್ರತಿನಿಧಿಗಳೂ ಕೂಡ ಧರ್ಮಸ್ಥಳದ ಲಕ್ಷದೀಪೋತ್ಸವ ಫೆಸ್ಟಿವರ್ ನಡೆಯುತ್ತಾ ಇರುವ ಸಂದರ್ಭದಲ್ಲಿ ತಮ್ಮ ಪತ್ರಿಕೆಗಳನ್ನು ಪ್ರಿಂಟ್ ಮಾಡಿಕೊಂಡು ಹಂಚುತ್ತಾ ಇದ್ದರು. ಆ ಪತ್ರಿಕೆಗಳಲ್ಲಿ ಧರ್ಮಸ್ಥಳದ ಮ್ಯಾನೇಜ್‌ಮೆಂಟ್ ಬಗ್ಗೆ ಏನೇನೋ ಬರೆದಿದ್ದಾರೆ ಎಂದು ಅಲ್ಲಿನ ಜನ ಅವರ ಮೇಲೆ ರೊಚ್ಚಿಗೆದ್ದು ಹೊಡೆಯುವ ಪ್ರಯತ್ನ ನಡೆದಾಗ ಪೋಲೀಸಿನವರು ಮಧ್ಯೆ ಪ್ರವೇಶಿಸಿ ಅವರನ್ನು ಹೊರಗಡೆ ಕಳುಹಿಸಿಕೊಟ್ಟರು.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಮಾನ್ಯಮಂತ್ರಿಗಳು ಶ್ರೀ ಕೆ. ಎಲ್. ರಾಮಕೃಷ್ಣ ರಾವ್ ಅವರು ಬರೆದ ಪತ್ರಕ್ಕೆ ಉತ್ತರವಾಗಿ ಕೇಂದ್ರದ ಗೃಹಮಂತ್ರಿಗಳಿಗೆ ತಾವು ಹೇಳಿದ ರೀತ್ಯ ಒಂದು ಪತ್ರವನ್ನು ಬರೆದಿರುವುದು ನಿಜವಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ನಾನು ಹೋದಾಗ ಅವರು ಯಾರೂ ಈ ರೀತಿ ಗಲಾಟೆ ಆಯಿತು ಎಂದು ನನ್ನ ಹತ್ತಿರ ಹೇಳಲಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಸ್ವಾಮಿ, (ಅ) ಗೆ ಉತ್ತರವಾಗಿ ಮೇಲೆ ಬೀಳುವ ಪ್ರಯತ್ನವೊಂದು ನಡೆಯಿತು ಎಂದು ಹೇಳಿದ್ದೀರಿ. ಅಂದರೆ ಅವರನ್ನು ಅನ್ಯಾಯವಾಗಿ ಬಂಧಿಸುವ ಪ್ರಯತ್ನ ನಡೆಯಿತೇ?

ಶ್ರೀ ವೀರೇಂದ್ರ ಪಾಟೀಲ್.—ಇಂಗ್ಲೀಷ್‌ನಲ್ಲಿ whether Government is aware that on 19th November 1968 atrocities have been committed on Newspaper Editors and Journalists at Dharmasthala ಅದಕ್ಕೆ "there was an attempt of assault", ಎಂದು ಹೇಳಿದೆ. ಆ ಇಬ್ಬರು ಪತ್ರಿಕೋದ್ಯಮಿಗಳು ಧರ್ಮಸ್ಥಳದ ಮ್ಯಾನೇಜ್‌ಮೆಂಟ್ ಬಗ್ಗೆ ಏನೇನೋ ಬರೆದಿದ್ದಾರೆ ಎಂದು ಅವರ ಮೇಲೆ ಕೃತ್ಯ ನಡೆದಾಗ ಪೋಲೀಸಿನವರು ಮಧ್ಯ ಪ್ರವೇಶಿಸಿ ಅವರನ್ನು ಹೊರಗಡೆ ಕಳುಹಿಸಿಕೊಟ್ಟರು.

ಶ್ರೀ ಬಿ. ಪಿ. ಗಂಗಾಧರ್.—ಸ್ವಾಮಿ, ವ್ಯಾನ್ ಹ್ಯಾಂಡ್‌ಲಿಂಗ್ ಮತ್ತು ರಾಂಗ್ ಪುಲ್ ಕನ್‌ಫ್ಯೆನ್‌ಮೆಂಟ್ ಆಯಿತೇ ಇಲ್ಲವೇ?

ಅಧ್ಯಕ್ಷರು.—ಉತ್ತರದ ಪ್ರಕಾರ ಇಲ್ಲ ಎಂದ ಹಾಗೆ ಆಯಿತು.

ಶ್ರೀ ವೀರೇಂದ್ರ ಪಾಟೀಲ್.—ಅದು ನ್ಪಷ್ಟವಾಗಿ ಹೇಳಿದ್ದೇನೆ. ಅದರಲ್ಲಿ ಏನಾಗಿದೆ ಎನ್ನುವುದನ್ನು ನನ್ನ ಮುಂದೆ ಇರುವ ಇನ್‌ಫರ್ಮೇಷನ್ ಪ್ರಕಾರ ಹೇಳಬೇಕಾಗಿದ್ದರೆ On seeing the contents of the paper, the public who had gathered to witness the festival, were highly enraged against the editors and tried to assault them. Meanwhile the Police intervened and brought the situation under control. Both the Editors left Dharmasthala soon after the incident.

2-00 P.M.

ಶ್ರೀ ಎಸ್. ಗೋಪಾಲಗೌಡ.—ಪೋಲೀಸರು ಮಧ್ಯೆ ಪ್ರವೇಶ ಮಾಡಿ ಪರಿಸ್ಥಿತಿಯನ್ನು ಹತೋಟಿಗೆ ತಂದರು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರಲ್ಲ. ಧರ್ಮಸ್ಥಳದಲ್ಲಿ ದೇವರ ಸುತ್ತ ಮುತ್ತ ಉಸ್ತುವಾರಿಯನ್ನು ನೋಡಿಕೊಳ್ಳುವುದಕ್ಕೆ ಸರ್ಕಾರದ ಪೋಲೀಸ್ ಇದೆಯೇ ಅಥವಾ ದೇವರಿಗೆ ಸಂಬಂಧಪಟ್ಟ ಪೂಜಾರಿಯ ಪೋಲೀಸ್ ಮಾತ್ರ ಇದೆಯೇ, ಆವೊತ್ತು ನಿಮ್ಮ ಪೋಲೀಸ್ ಅಲ್ಲಿಗೆ ಹೋಗಿತ್ತೇ ! ಅದಕ್ಕೆ ತಮ್ಮ ಹತ್ತಿರ ಏನಾದರೂ ಉತ್ತರವಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.— ದೀಪೋತ್ಸವ ಇದೆ, ಬಹಳ ಜನ ಸೇರುತ್ತಾರೆ ಎಂದು ಎಲ್ಲ ಕಡೆಯೂ ಮಾಡುವ ಹಾಗೆ ಅಲ್ಲಿಗೂ ಪೋಲೀಸ್ ಬಂದೋಬಸ್ತು ಮಾಡಲು ಪೋಲೀಸರನ್ನು ಕಳಿಸಲಾಗಿತ್ತು. ಅಲ್ಲಿ ಗದ್ದಲ, ಗಲಾಟೆ ಆದಾಗ ಇವರಿಬ್ಬರನ್ನೂ ಉಳಿಸಿಕೊಂಡು ಅವರಿಗೆ ರಕ್ಷಣೆ ಕೊಟ್ಟು ಕಳಿಸಿಕೊಟ್ಟಿದ್ದಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಬೆಳ್ತಂಗಡಿ ಕ್ಷೇತ್ರದಲ್ಲಿ ನಡೆದ ಮರು ಚುನಾವಣೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಅಲ್ಲಿಗೆ ಹೋಗಿದ್ದು ಧರ್ಮಸ್ಥಳದ ಅಧಿಕಾರಿಗಳಾದ ವೀರೇಂದ್ರ ಹೆಗಡೆ ಅವರನ್ನು ತಬ್ಬಿ ಹಿಡಿದು ಏಕನಾಮ ಪಡೆದವರಾದ ಕಾರಣ ಧರ್ಮಸ್ಥಳದಲ್ಲಿ ಏನು ನಡೆದರೂ ನಾನಿದ್ದೇನೆ, ಕಾಂಗ್ರೆಸ್ ಪಕ್ಷಕ್ಕೆ ಓಟು ಕೊಡುವಂತೆ ಮಾಡಿ ಎಂದು ಕಾಂಗ್ರೆಸ್ ಮಾಡಿದ್ದು ನಿಜವಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಇದಕ್ಕಾಗಿಯೇ ಪ್ರಶ್ನೆ ಹಾಕಿದ್ದಾರೆ, ಇಲ್ಲದೆ ಇದ್ದರೆ ಹಾಕುತ್ತ ಇರಲಿಲ್ಲ ಎಂದು ಕಾಣಿಸುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಇಬ್ಬರು ಪ್ರತಿಕೋದ್ಯಮಿಗಳನ್ನು ಹೊಡೆಯುವುದಕ್ಕೆ ಕಾರಣ ಏಂದರೆ ಮಿಸ್‌ಮ್ಯಾನೇಜ್‌ಮೆಂಟ್ ವಿಚಾರ ಪತ್ರಿಕೆಯಲ್ಲಿ ಬರೆದದ್ದು ಎನ್ನುವುದು. ಮಿಸ್‌ಮ್ಯಾನೇಜ್‌ಮೆಂಟ್ ನಡೆಯುತ್ತಿದೆ, ದೇವರ ಹೆಸರಿನೊಳಗೆ ಕೆಲವರು ತಮ್ಮ ಸ್ವಹಿತವನ್ನು ಸಾಧಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎನ್ನುವ ದೂರು ಸರ್ಕಾರಕ್ಕೆ ಬಂದಿಲ್ಲವೇ ? ಹಾಗೆ ಬಂದಿದ್ದರೆ ಈಗಲೂ ಕೂಡ ತಿರುಪತಿ ದೇವಸ್ಥಾನದಲ್ಲಿರುವ ಹಾಗೆ ಒಂದು ಕಮಿಟಿಯನ್ನು ಏರ್ಪಾಡು ಮಾಡಿ ಸರ್ಕಾರದ ಬೊಕ್ಕಸಕ್ಕೆ ಹಣ ಬರುವಂತೆ ಮಾಡುತ್ತೀರಾ, ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಇನ್ನೊಂದು ಪ್ರತ್ಯೇಕ ಪ್ರಶ್ನೆಯನ್ನು ಕೇಳಿದ್ದಾರೆ. ಅಲ್ಲಿನ ಮ್ಯಾನೇಜ್‌ಮೆಂಟ್ ತೆಗೆದುಕೊಳ್ಳುತ್ತೀರಾ, ಮತ್ತೆ ಯಾವುದೋ ಸಂಸ್ಥೆಯಲ್ಲಿ ಯಾವುದೋ ರೀತಿ ಮಾಡಿದ್ದಾರೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಏನೇನೂ ಗೊತ್ತಿಲ್ಲದೆ ನಾನು ಏನೂ ಹೇಳುವುದಕ್ಕಾಗುವುದಿಲ್ಲ. ಪ್ರತ್ಯೇಕ ಪ್ರಶ್ನೆ ಹಾಕಿದರೆ ಪರಿಶೀಲನೆ ಮಾಡಿ ಹೇಳುತ್ತೇನೆ.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಮುಖ್ಯ ಸಚಿವರು ಉತ್ತರ ಕೊಡುವಾಗ ಸ್ವಲ್ಪ ನಿಖರವಾದ ಉತ್ತರ ಕೊಡಲಿಲ್ಲ ಎಂದು ನನಗನ್ನಿಸಿತು. ಜನಜಾಗೃತಿ ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ನೋಡಿದೆ. ಮುಖ್ಯ ಮಂತ್ರಿಯವರ ವಿಳಾಸಕ್ಕೆ ಶ್ರೀ ಕೆ. ಎಲ್. ರಾಮಕೃಷ್ಣರಾವ್ ಮತ್ತು ಗುರುಬಸಪ್ಪ ಅವರು ಬರೆದ ಪತ್ರ ಮತ್ತು ಅದಕ್ಕೆ ಅವರು ಏನು ಉತ್ತರ ಕೊಟ್ಟಿದ್ದಾರೆ ಎನ್ನುವುದು ಅಚ್ಚಾಗಿದೆ. ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಒಂದು ಪತ್ರ ಬರೆದಿದ್ದಾರೆ. ಅದಕ್ಕೆ ಕೂಡ ಉತ್ತರ ಬಂದಿದೆ. ಅದೂ ಅಚ್ಚಾಗಿದೆ. ಅದನ್ನು ನಾನು ಈವೊತ್ತು ನೋಡಿದ್ದೇನೆ. ಮಾನ್ಯ ಮಂತ್ರಿಗಳು ಹೇಳುವುದನ್ನು ನೋಡಿದರೆ ನನ್ನ ಗಮನಕ್ಕೆ ಏನೂ ಬಂದಿಲ್ಲ, ನನಗೆ ಯಾರೂ ದೂರು ಕೊಟ್ಟಿಲ್ಲ ಎನ್ನುವ ರೀತಿಯಲ್ಲಿ ಮಾತನಾಡಿದ್ದಾರೆ. ಸುಪ್ರೀಂ ಕೋರ್ಟಿನವರು, ಹೈಕೋರ್ಟಿನವರು ತೀರ್ಮಾನ ಮಾಡಿದ್ದಾರೆ. ಆ ತೀರ್ಮಾನಗಳು ಏನೇ ಇರಲಿ ಈ ದೇವರು ಯಾರಿಗೆ ಸೇರಿದ್ದು ಪೂಜಾರಿಗೆ ಸೇರಿದ್ದೋ ಭಕ್ತರಿಗೆ ಸೇರಿದ್ದೋ ; ಇದರ ಇತಿಹಾಸ ವೇನು ; ಹಿಂದೆ ಏನೇನು ತೀರ್ಮಾನಗಳಾಗಿವೆ ; ಎಷ್ಟು ಸಹಸ್ರ ಜನರು ವರ್ಷಕ್ಕೆ ಅಲ್ಲಿಗೆ ಹೋಗಿ ನಿವೇದಿಸಿಕೊಳ್ಳುತ್ತಾರೆ ; ಧರ್ಮಸ್ಥಳಕ್ಕೆ ಕಾಣಿಕೆ ಕೊಡುತ್ತಾರೆ ; ಇದನ್ನು ಯಾರು ಮ್ಯಾನೇಜ್ ಮೆಂಟ್ ಮಾಡುತ್ತಾರೆ ; ಹೇಗೆಮಾಡುತ್ತಾರೆ ಮತ್ತು ಅಲ್ಲಿ ಬೇರೆ ಬೇರೆ ಜಾತಿಯವರಿಗೆ ಬೇರೆ ಬೇರೆ ಪಂಕ್ತಿ ಹಾಕಿ ಊಟ ಮಾಡಿಸುವುದುಂಟೇ ? ಧರ್ಮಸ್ಥಳದ ಮೇರೆ ಸರ್ಕಾರದವರು ಏನಾದರೂ ಹತೋಟಿಯನ್ನಿಟ್ಟುಕೊಂಡಿದ್ದಾರೆಯೇ, ಅಲ್ಲಿ ಹಣ ಯಾವರೀತಿ ಖರ್ಚಾಗುತ್ತದೆ ? ಇದಕ್ಕೆ ತಾವು ದಯವಿಟ್ಟು ಸತ್ಯಕ್ಕೆ ದೂರವಾದ ಮಾತುಗಳನ್ನ ಹೇಳಿದರೆ ತಪ್ಪಾಗುತ್ತದೆ. ಅದಕ್ಕೆ ನಾನು ಹೇಳುವುದು ಇದರ ಬಗ್ಗೆ ವಿಚಾರ ಮಾಡಿದ್ದೀರಾ, ಪೋಲೀಸ್ ಸ್ಟೇಷನ್ ಅಲ್ಲಿ ಹಾಕಿದ್ದೀರಾ, ಅಣ್ಣಪ್ಪ ದೇವರು ಯಾರದ್ದು, ಆ ದೇವರು ಯಾರಿಗೆ ಸೇರಬೇಕು, ಸುಪ್ರೀಂ ಕೋರ್ಟ್ ಏನು ಆಜ್ಞೆ ಮಾಡಿದೆ ?

ದಯವಿಟ್ಟು ನಾನು ಕೇಳಿದ ಪ್ರಶ್ನೆಗೆ ಉತ್ತರ ಕೊಡಬೇಕು. ಅಲ್ಲಿ ಪೋಲೀಸ್ ಸ್ಟೇಷನ್ ಹಾಕಿದಿರಾ, ಅಲ್ಲಿ ನಡೆಯುತ್ತಿರುವ ಘಟನೆಯ ಬಗ್ಗೆ ಛಾರ್ಜ್‌ಷೀಟ್ ಹಾಕಿದೆಯೇ, ಕ್ರಮ ತೆಗೆದುಕೊಳ್ಳಲಾಗಿದೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ವೀರೇಂದ್ರ ಪಾಟೀಲ್.—ಇಲ್ಲಿ ಪ್ರಶ್ನೆ ಇರುವುದು 21-11-68 ರಲ್ಲಿ ಲಕ್ಷ ದೀಪೋತ್ಸವ ಹಬ್ಬದಲ್ಲಿ ಏನು ಘಟನೆ ನಡೆದಿದೆ, ಅಂದರೆ ಎಡಿಟರುಗಳು ಮುಂತಾದವರು ಅಲ್ಲಿಗೆ ಹೋದಾಗ ಅಸಾಲ್ಟ್ ನಡೆದಿದೆಯೆ, ಅವರ ರಾಂಗ್‌ಫುಲ್ ಕನ್‌ಫೈನ್‌ಮೆಂಟ್ ಇತ್ತೇ ಎಂಬುದು. ಅದನ್ನು ಬಿಟ್ಟು ಅಲ್ಲಿ ಎಷ್ಟು ಆದಾಯ ಬರುತ್ತದೆ, ಎಷ್ಟು ಖರ್ಚಾಗಿದೆ ಎಂದು ಮುಂತಾಗಿ ಮಾನ್ಯ ಸದಸ್ಯರು ಬೇರೆ ಬೇರೆ ಪ್ರಶ್ನೆಗಳನ್ನು ಕೇಳುವುದು ಈ ಪ್ರಶ್ನೆಗೆ ಸಂಬಂಧಪಟ್ಟಿಲ್ಲ. ನಾನು ಈ ಪ್ರಶ್ನೆಗೆ ಐ.ಜಿ.ಪಿ. ನಿಂದ ಬಂದಿರುವ ವರದಿ ಪ್ರಕಾರ ಉತ್ತರ ಕೊಟ್ಟಿದ್ದೇನೆ, ಇನ್‌ಸಿಡೆಂಟ್ ಆದಾಗ ಪತ್ರಿಕೋದ್ಯಮಿಗಳಿಗೆ ರಕ್ಷಣೆ ಕೊಟ್ಟು ಸೇಫ್ ಆಗಿ ಅವರನ್ನು ಕಳಿಸಿದ್ದೇವೆ. ವರದಿಯಲ್ಲಿ ಈ ರೀತಿ ಹೇಳಿದ್ದಾರೆ:

> "So far no complaint was received from the editors against anyone and no further action could be taken by the Police."

ಈ ಸಂಬಂಧದಲ್ಲಿ ಕಂಪ್ಲೈಂಟ್ ಏನೂ ಬಂದಿಲ್ಲವೆಂದು ಹೇಳಿದ್ದಾರೆ. ಈಗ ಮಾನ್ಯ ಸದಸ್ಯರು ಕ್ರಮ ತೆಗೆದುಕೊಳ್ಳಬೇಕು, ಮ್ಯಾನೇಜ್‌ಮೆಂಟ್ ಸರಿಯಾಗಿಲ್ಲ ಎಂದು ಮುಂತಾಗಿ ಹೇಳುವುದು ಈ ಪ್ರಶ್ನೆಗೆ ಸಂಬಂಧಪಟ್ಟಿಲ್ಲ. ಈ ವಿಚಾರದಲ್ಲಿ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಜಾರ್ಜ್ ಫರ್ನಾಂಡೀಸ್‌ರವರು ಪತ್ರ ಬರೆದಿದ್ದರು, ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಬೇರೆ ಯಾರು ಕಂಪ್ಲೈಂಟ್ ಕೊಟ್ಟಿಲ್ಲ.

ಅಧ್ಯಕ್ಷರು.—ಪ್ರಶ್ನೋತ್ತರಗಳ ಕಾಲ ಮುಗಿಯಿತು.

QUESTIONS FOR ANSWERS ON THE DAY

(but not taken up)

Lime Stone Deposits

497. Sri L. SRIKANTAIAH (Nanjangud).—

Will the Minister for Industries, Information and Publicity be pleased to state :—

(*a*) whether the Government is aware that rich lime stone deposits are found round about Begoor village, Begoor Hobli, Gundlupet Taluk, Mysore District ;

(*b*) whether a survey has been made by any agency of the Government to find out the quantum of lime stone in the said belt ;

(*c*) the minimum availability of lime stone deposit insisted for the starting of a cement factory ;

(*d*) (i) whether the cement factories at Bhadravathi, Ammasandra and other places command assured supply of lime stone ;

(ii) and if so, what is the quantity ;

(iii) and within what radius of the factory ?